

# ಗೊಜ್ಜಿನ ಮರಿಗೆ

ಇದು ಶತಮಾನದ ಇತಿಹಾಸ ಹೊಂದಿರುವ ಮರದ ಮರಿಗೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿ ಮರಿಗೆ ಗೊಜ್ಜು ಎಂಬ ರುಚಿಕರ ಪದಾರ್ಥವನ್ನು ಅರೆಯಲು ಇದನ್ನು ಬಳಸುವ ಸಂಪ್ರದಾಯವಿದೆ. ಜೀರಿಗೆ ಮೆಣಸಿನಕಾಯಿ, ಬಿಳಿ ಎಳ್ಳು, ಕೊತ್ತಂಬರಿ ಬೀಜ ಹಾಗೂ ಬೆಳ್ಳುಳ್ಳಿ ಎಸಳುಗಳನ್ನು ಹುರಿದು ಈ ಮರಿಗೆಯಲ್ಲಿ ಹಾಕಿಕೊಂಡು ಗುಂಡನೆಯ ಸಣ್ಣ ಕಲ್ಲಿನಿಂದ ಅರೆಯುತ್ತಾರೆ. ಕಲ್ಲಿನಿಂದ ಉಜ್ಜಿ ಉಜ್ಜಿ ನುಣ್ಣನೆಯ ಪುಡಿಯಾದ ನಂತರ ಅದಕ್ಕೆ ಗಟ್ಟಿಯಾದ ಕೆನೆ ಮೊಸರು ಹಾಗೂ ಉಪ್ಪು ಸೇರಿಸುತ್ತಾರೆ. ಇದನ್ನು ಅನ್ನಕ್ಕೆ ಕಲೆಸಿಕೊಂಡು ತಿಂದರೆ ಬಲು ರುಚಿ. ಈ ಮರಿಗೆಯನ್ನು ಬೀಟೆ ಮರದಿಂದ ಮಾಡಿದ್ದು, ನನ್ನ ತಂದೆಯ ಅಜ್ಜಿಯ ಕಾಲದಿಂದ ಹಿಡಿದು ಇತ್ತೀಚಿನವರೆಗೂ ಅವರ ಮನೆಯಲ್ಲಿ ಬಳಸುತ್ತಿದ್ದರು.

ಚಿತ್ರ- ಬರಹ: **ಉಷಾ ದಿವಾಕರ ಹಲಗೇರಿ, ಸಿದ್ದಾಪುರ**





# ಪಾಲಿಕೆ ಕಚೇರಿಯಾದ ಅರಮನೆ

ಮಹಾರಾಷ್ಟ್ರದ ಸೊಲ್ಲಾಪುರದಲ್ಲಿರುವ ಈ ಕಟ್ಟಡದಲ್ಲಿ ಮಹಾನಗರ ಪಾಲಿಕೆ ಕಚೇರಿಯಿದೆ. ಇದು ಹಿಂದೆ ಅರಮನೆಯಾಗಿತ್ತು. ಪುಣ್ಯಶ್ಲೋಕ ಅಣ್ಣಾಸಾಹೇಬ ಉರುಫ್ ರಾವಬಹದ್ದೂರ ಬಸಪ್ಪಾ ವಾರದ ಎಂಬುವವರಿಗೆ ಸೇರಿದ್ದ ಈ ಅರಮನೆ ದಾಯಾದಿ ಕಲಹದಲ್ಲಿ ಯಾರಿಗೆ ಸೇರಬೇಕು ಎಂಬ ಜಿಜ್ಞಾಸೆ ಹುಟ್ಟಿತು. ಆಗ ಈ ವಾರದ ಅವರು ಅರಮನೆಯನ್ನು ಸರ್ಕಾರಕ್ಕೆ ಕಾಣಿಕೆಯಾಗಿ ನೀಡಿದರು ಎಂಬ ಪ್ರತೀತಿಯಿದೆ. ಇನ್ನೊಂದು ದಂತಕಥೆಯ ಪ್ರಕಾರ ಸ್ವಾತಂತ್ರ್ಯ ಪೂರ್ವದ ರಜಾಕಾರರ ಸರ್ಕಾರ ಇದನ್ನು ತೆರಿಗೆ ರೂಪದಲ್ಲಿ ಪಡೆಯಿತಂತೆ.

ಚಿತ್ರ- ಬರಹ: **ಪಂಡಿತರಾವ ಪಾಟೀಲ ಸರಸಂಬಾ, ವಿಜಯಪುರ**

# ಸಾಂತಾಕ್ಲಾಸ್ ಉಡುಗೊರೆ

ಮಕ್ಕಳ ಮೇಲಿನ ಪ್ರೀತಿಗೆ ಖ್ಯಾತನಾಗಿದ್ದ ಸಂತ ನಿಕೋಲಾಸ್ ಎಂಬ ಪಾದ್ರಿ ಕ್ರಿಸ್ಮಸ್ ಸಂದರ್ಭದಲ್ಲಿ ಒಳ್ಳೆಯ ನಡತೆಯ ಮಕ್ಕಳಿಗೆ ಉಡುಗೊರೆ ನೀಡಲು ಸಾಂತಾಕ್ಲಾಸ್ ಆಗಿ ಬರುತ್ತಾನೆಂಬ ನಂಬಿಕೆಯಿದೆ. ಪುತ್ತೂರು ಸಮೀಪದ ಪದವೀಧರ ಕೃಷಿಕ ವಿನ್ಸೆಂಟ್ ಮಿನೇಜಸ್ ಅವರು ಕಳೆದ 16 ವರ್ಷಗಳಿಂದಲೂ ಸತತವಾಗಿ ಸಾಂತಾಕ್ಲಾಸ್ ವೇಷ ಧರಿಸಿ ಕಾಸರಗೋಡು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಹಳ್ಳಿ ಹಾಗೂ ಪಟ್ಟಣಗಳಲ್ಲಿ ಸಂಚರಿಸುತ್ತಾರೆ. ಮಕ್ಕಳಿಗೆ ಸಿಹಿ ಹಂಚಿ ಖುಷಿ ಪಡುತ್ತಾರೆ.

ಚಿತ್ರ- ಬರಹ: **ಡಾ.ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**

